ರೈತರಿಗೆ ಬಹಳ ಸಮಸ್ಯಾತ್ಮಕ ವಾತಾವರಣವನ್ನು ಸೃಷ್ಟಿ ಮಾಡಿವೆ. 20 ದೊಡ್ಡ ಕೈಗಾರಿಕೆಗಳಿಗೆ 40 ರಿಂದ 60 ಪರ್ಸೆಂಟ್ ವಿದ್ಯುತ್ ಖೋತ ಹೆಚ್ಚು ಮಾಡಿರುವುದನ್ನು ಅವತ್ತಿನಿಂದಲೇ ಜಾರಿಗೆ ತಂದಿದ್ದೇವೆ. ಆದರಿಂದಾಗಿ ಕೊಂಚ ಮಟ್ಟಿಗಾದರೂ ಪರಿಸ್ಥಿತಿ ಸುಧಾರಣೆಯಾಗುತ್ತದೆಂಬ ಆಶಾಭಾವನೆ ನಮ್ಮಲ್ಲಿತ್ತು. ಆದರೆ ಮಾನ್ಯ ಸದಸ್ಯರು ಕೊಟ್ಟಿರುವ ಮಾಹಿತಿ ಆಧಾರದ ಮೇಲೆ ಮತ್ತೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸಾಯಂಕಾಲದೊಳಗೆ ಸದನಕ್ಕೆ ನನ್ನ ಅಭಿಪ್ರಾಯಗಳನ್ನು ತಿಳಿಸುತ್ತೇನೆ.

ನಿಯಮ 334ರ ಮೇರೆಗೆ

1. ಬೆಂಗಳೂರು ನಗರದ ರಸ್ತೆಗಳ ದುರಸ್ತಿ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಒಂದೆರಡು ರಸ್ತೆಗಳನ್ನು ಬಿಟ್ಟರೆ ಉಳಿದ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ಸಾಮಾನ್ಯವಾಗಿ ಮಳೆಗಾಲ ಕಳೆದ ನಂತರ ನವೆಂಬರ್ ಮಾಹೆಯಲ್ಲಿ ಕೆಲಸ ಪ್ರಾರಂಭವಾಗಿ ಫೆಬ್ರವರಿಯೊಳಗಾಗಿ ರಸ್ತೆ ರಿಪೇರಿ ಕೆಲಸ ಮುಗಿಯುತ್ತಿತ್ತು. ಈ ಬಾರಿ ಯಾರೂ ಈ ಕಡೆ ಗಮನ ಹರಿಸಿರುವುದಿಲ್ಲ. ಕೆಲವು ರಸ್ತೆಗಳಲ್ಲಿ ಹಳ್ಳಗಳಿದ್ದು ರಾತ್ರಿ ಕಾಲದಲ್ಲಿ ವಾಹನ ಸಂಚಾರಕ್ಕೆ ಬಹಳ ಕಷ್ಟವಾಗುತ್ತಿದೆ. ಸಾಲದಕ್ಕೆ ಕೆಲವು ಕಡೆ ರಸ್ತೆ ದೀಪಗಳೂ ಇಲ್ಲದೇ ಇರುವ ಕಾರಣ ಮತ್ತಷ್ಟು ತೊಂದರೆಯಾಗುತ್ತಿದೆ. ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾಹಿತಿ ಬರುವುದು ಸ್ವಲ್ಪ ಲೇಟಾಗಿದೆ ದಯವಿಟ್ಟು ಟೈಮ್ ಕೊಡಬೇಕು.

2. ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರ ಪೇಟೆಗಳಲ್ಲಿ ಮನೆ ನಿವೇಶನಗಳ ಹಂಚಿಕೆ

ಶ್ರೀಮತಿ ಸುಮಾ ವಸಂತ್(ವಿರಾಜ ಪೇಟೆ):– ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಮನೆ ನಿವೇಶನಗಳನ್ನು ಹಂಚುವ ಬಗ್ಗೆ ಆಯಾ ಸ್ಥಳಗಳಲ್ಲಿ ನಿವೇಶನ ಮಂಜೂರು ಮಾಡದಂತೆ ಹಾಗೂ ಮಂಜೂರಾತಿಗೆ ಸರ್ಕಾರಕ್ಕೆ ಕಳುಹಿಸಬೇಕೆಂದೂ ಸರ್ಕಾರ ಆದಿಸೂಚನೆ ನೀಡಿರುವುದಾಗಿ ತಿಳಿದುಬಂದಿದೆ. ನಿವೇಶನ ಮಂಜೂರಾತಿಗೆ ಸಂಬಂಧಪಟ್ಟ ಎಲ್ಲ ಅರ್ಜಿಗಳು ಜಿಲ್ಲಾಧಿಕಾರಿಗಳಲ್ಲಿ ಉಳಿದಿದೆ. ನಿವೇಶನಕ್ಕಾಗಿ ಕೊಡುವ ಮೂರುಮುಕ್ಕಾಲು ಸೆಂಟು ಜಾಗವನ್ನು ಸರ್ಕಾರವೇ ಮಂಜೂರು ಮಾಡುವುದನ್ನು ಬಿಟ್ಟುಕೊಟ್ಟಲ್ಲಿ ಬಡಜನರಿಗೆ ಅನುಕೂಲವಾಗುವಂಥ ತೀರ್ಮಾನ ತೆಗೆದುಕೊಂಡ ಬಗ್ಗೆ ಸದನಕ್ಕೆ ಹೇಳಿಕೆ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇನೆ. ರಾಜ್ಯ ಸರ್ಕಾರವು ವೈಯಕ್ತಿಕವಾಗಿ ಹಾಗೂ ಖಾಸಗಿ ಸಂಸ್ಥೆಗಳಿಗಾಗಿ ಸರ್ಕಾರ ಜಮೀನನ್ನು ಮಂಜೂರು ಮಾಡುವ ಮೊದಲು ಸರ್ಕಾರದ ಮಂಜೂರಾತಿಯನ್ನು ಪಡೆಯಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಸದರಿ ಪೂರ್ವಭಾವಿ ಷರತ್ತನ್ನು 1989ರಿಂದ ವಿಧಿಸಲಾಗಿದೆ. ಏಕೆಂದರೆ, ಮಂಜೂರಾತಿ ಮಾಡುವ ಅಧಿಕಾರಿಗಳು ಯಥೇಚ್ಚವಾಗಿ ಜಮೀನನ್ನು ಮಂಜೂರು ಮಾಡುತ್ತಿದ್ದರು. ಸರ್ಕಾರಿ ಜಮೀನಿನಲ್ಲಿ ನಿವೇಶನಗಳನ್ನು ವಿತರಣೆ ಮಾಡುವ ವಿಚಾರದಲ್ಲಿಯೂ, ಜಿಲ್ಲಾಧಿಕಾರಿಗಳು

ನಿವೇಶನಗಳನ್ನು ಮಂಜೂರು ಮಾಡುವ ಮೊದಲು ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕೆಂದು ಸೂಚಿಸಿರುತ್ತದೆ. ಆದರೂ ಕೂಡ ಆಶ್ರಯ ಯೋಜನೆಯಲ್ಲಿ ನಿವೇಶನಗಳನ್ನು ವಿತರಣೆ ಮಾಡುವ ವಿಷಯದಲ್ಲಿ ಅವಶ್ಯವಿದ್ದಲ್ಲಿ ಗೋಮಾಳ ಜಮೀನನ್ನು ಉಪಯೋಗಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಪ್ರಾಧಿಕಾರ ನೀಡಿರುತ್ತದೆ. ಆದರೆ ನಗರ ಪ್ರದೇಶಗಳಲ್ಲಿ ನಿವೇಶನಗಳನ್ನು ಹಂಚಬೇಕಾದರೆ, ಭೂ ಮಂಜೂರಾತಿ ನಿಯಮಗಳ ಅನುಸಾರವಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯುವುದು ಅವಶ್ಯವಾಗಿದೆ.

3. ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಗೊರೂರು ಹತ್ತಿರ ಹೇಮಾವತಿ ನದಿಗೆ ಡ್ಯಾಂ ಕಟ್ಟಿಸುವುದರಿಂದ ಹಾಸನ ತಾಲ್ಲೂಕಿನ ಫಲವತ್ತಾದ ಜಮೀನು ಮುಳುಗಡೆಯಾಗಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ):– ಮಾನ್ಯ ಅಧ್ಯಕ್ಷರೇ, ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ, ಗೊರೂರು ಹತ್ತಿರ ಹೇಮಾವತಿ ನದಿಗೆ ಡ್ಯಾಂ ಕಟ್ಟಿದ್ದು ಇದರಿಂದ ಹಾಸನ ತಾಲ್ಲೂಕಿನ ಫಲವತ್ತಾದ ಅಡಿಕೆ, ತೆಂಗು ಬೆಳೆಯುತ್ತಿದ್ದ ಬಾಗಾಯ್ತು ಮತ್ತು ತರಿ ಜಮೀನು ಮುಳುಗಡೆಯಾಗಿದೆ. ಡ್ಯಾಂನಿಂದ ಮುಳುಗಡೆಯಾದ ರೈತರು ಗೊರೂರಿನ ಅಕ್ಕಪಕ್ಕ ಖುಷ್ಕಿ ಜಮೀನನ್ನು ಪಡೆದು ವ್ಯವಸಾಯ ಮಾಡುತ್ತಿರುತ್ತಾರೆ. ಈ ರೀತಿ ಮುಳುಗಡೆಯಾದ ರೈತರ ಜಮೀನಿಗೆ ನೀರು ಒದಗಿಸಲು ಮತ್ತು ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಕ್ರಮವಾಗಿ ಆಂಜನೇಯಪುರದ ಹತ್ತಿರ ಒಂದು ಏತ ನೀರಾವರಿ ಯೋಜನೆಯನ್ನು ಸರ್ಕಾರ ಈಗ್ಗೆ ಎರಡು ವರ್ಷಗಳ ಹಿಂದೆ ಮಂಜೂರು ಮಾಡಿತು. ಈ ಏತ ನೀರಾವರಿ ಯೋಜನೆಯು ಕಾರ್ಯಗತವಾಗಲು ಟೆಕ್ನಿಕಲ್ ಬೋರ್ಡ್‌ನಲ್ಲಿ ಮಂಜೂರಾಗಿದೆ ಮತ್ತು ಆಡಳಿತಾತ್ಮಕ ಮಂಜೂರಾತಿ ಕೂಡ ಆಗಿದೆ. ಈಗ್ಗೆ ಒಂದು ವರ್ಷದ ಹಿಂದೆ ಟರ್ನ್ ಕೀ ಬೇಸಿಸ್‌ನಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಟೆಂಡರನ್ನು ಸಹ ಕರೆದಿದ್ದು ಆರು ತಿಂಗಳ ಮೇಲಾಗಿದೆ. ಈ ಟೆಂಡರಿಗೆ ಸರ್ಕಾರ ಮಂಜೂರಾತಿ ನೀಡಿಲ್ಲವೆಂದು ತಿಳಿಯಿತು. ಈ ಏತ ನೀರಾವರಿ ಯೋಜನೆಯನ್ನು 1979ನೇ ಇಸವಿಯಲ್ಲಿ ಕಾರ್ಯಗತ ಮಾಡಲು ಅಂದಾಜು ವೆಚ್ಚ ತಯಾರಾಗಿದ್ದು ಅದರ ಅಂದಾಜು ವೆಚ್ಚ ಆಗ ಸುಮಾರು 2 ಕೋಟಿ ರೂಪಾಯಿ ಇದ್ದು, ಈಗ ಇದೇ ಕೆಲಸ 14 ವರ್ಷಗಳ ನಂತರ ಸುಮಾರು 10 ಕೋಟಿ ರೂಪಾಯಿಗಳು ಆಗಲಿದೆ. ಈ ಕೆಲಸವನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡದಿದ್ದರೆ ಈ ಯೋಜನೆಯ ವೆಚ್ಚ ವರ್ಷವೊಂದಕ್ಕೆ 15ರಿಂದ 20ರಷ್ಟು (ಶೇಕಡ) ಜಾಸ್ತಿ ಆಗುವುದಲ್ಲದೆ ಈ ಯೋಜನೆಯಿಂದ ಉಪಯೋಗ ಪಡೆಯುವ ರೈತರ ಆರ್ಥಿಕ ಸ್ಥಿತಿಯು ಸುಧಾರಿಸದೇ ದುಸ್ಥಿತಿಗೆ ಒಳಪಡಿಸಿದಂತಾಗಿದೆ. ಈ ಕಾರಣಗಿಂದ ಆಂಜನೇಯಪುರದ ಏತ ನೀರಾವರಿ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಆಂಜನೇಯಪುರ ಏತ ನೀರಾವರಿ ಯೋಜನೆ ಮುಖ್ಯವಾಗಿ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾದ ಹಳ್ಳಿಗಳಲ್ಲಿನ ಜನರಿಗೆ ಪುನರ್‌ವಸತಿ ಕಲ್ಪಿಸಿರುವ ಜಮೀನುಗಳಿಗೆ ನೀರುಣಿಸುವ ಯೋಜನೆಯಾಗಿದೆ.

ಈ ಯೋಜನೆಯಿಂದ ಹೇಮಾವತಿ ಜಲಾಶಯದಲ್ಲಿ ಜಮೀನುಗಳನ್ನು ಕಳೆದುಕೊಂಡ ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿ 45 ಹಳ್ಳಿಗಳ ರೈತರಿಗೆ ಜಲಾಶಯದ ಮುಂದಂಡೆಯಿಂದ ನೀರನ್ನು